ಚಲಿಸುತ್ತಲೇ ಬದುಕನ್ನು ತನ್ನ ಪ್ರಜ್ಞೆ ಮೂಲಕ ಅವಲೋಕಿಸುವಾಗ ಭೂತ ಮತ್ತು ವರ್ತಮಾನವನ್ನು ಒಂದಾಗಿಸುತ್ತಾನೆ. ಮನೆತನವನ್ನು ಕಟ್ಟಿದ್ದು, ಹೆಂಡತಿಯ ಘನತೆ, ಸ್ವಾತಂತ್ರ್ಯ ಚಳವಳಿ, ರಜಾಕಾರರ ಹಾವಳಿಯಲ್ಲಿ ಕೇಡು ಬಗೆದಿದ್ದ ಹುಸೇನಿಗೆ ಜೀವದಾನ ಮಾಡಿದ್ದು, ಭೂತಕಾಲದ ನೆನಪುಗಳು, ಮಗನ ಸಮಾಜಘಾತುಕ ಚಟುವಟಿಕೆಗಳ ಸುದ್ದಿಗಳು, ನಾಯಿಯ ಸಾವು, ಊರ ವಿದ್ಯಮಾನಗಳು, ಒಕ್ಕಲುತನದ ಚಟುವಟಿಕೆಗಳು ವರ್ತಮಾನದಲ್ಲಿ ಕಾಣುತ್ತ ಈ ಎರಡು ಕ್ರಿಯೆಗಳು ಗೌಡನ ಒಳಗೆ, ಗೌಡನ ಕಣ್ಣ ಮುಂದೆ ನಡೆಯುವುದು ಕಥೆಯಲ್ಲಿ ಹೂ ಅರಳಿದಂತೆ ಬಿಚ್ಚಿಕೊಳ್ಳುತ್ತವೆ. ಗೌಡನು ಒಬ್ಬ ವ್ಯಕ್ತಿಯಾಗಿ ಕುಟುಂಬದ ಒಳಗೆ, ಸಮಾಜದ ನಡುವೆ ತನ್ನ ಸ್ಥಾನ ಏನೆಂದು ಶೋಧಿಸುತ್ತಾರೆ. ತಾನು ಏನೆಂಬುದು ತನಗೆ ಮಾತ್ರ ಗೊತ್ತು. ತನಗೆ ಸಲಾಂ ಹೊಡೆಯುವ ಜನರನ್ನು, ಸಮಾಜವನ್ನು ಗೌಡನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ.

ಈ ಜನ ಏಕೆ ನನಗೆ ಇಷ್ಟು ಮರ್ಯಾದೆ ಕೊಡಬೇಕು? ನಾನೇನು ಅಂತಹ ದೊಡ್ಡ ಉಪಕಾರದ ಹೊರೆ ಹೊರೆಸಿದ್ದೇನೆ ಇವರ ಮೇಲೆ? ಹಿಂದೆ ನಿಜಾಮನ ರಾಜ್ಯದಲ್ಲಿ ಹೊಡೆದು ಬಡಿದು, ಹಿಂಸೆ ಕೊಡುವ ರಜಾಕಾರರಿಗೂ ಈ ರೀತಿ ಸಲಾಮು ಹಾಕುತ್ತಿದ್ದರು. ಈಗ ನನಗೂ ಹಾಕುತ್ತಿದ್ದಾರೆ. ಎಲ್ಲರಿಗೂ ಒಂದೇ ಮರ್ಯಾದೆ. ಒಟ್ಟಿನಲ್ಲಿ ಈ ಜನರಿಗೆ ಸಲಾಮು ಹಾಕಲು ಒಬ್ಬ ವ್ಯಕ್ತಿ ಬೇಕು ಅಷ್ಟೇ. ಆ ವ್ಯಕ್ತಿ ಒಳ್ಳೆಯವನಿರಲಿ, ಕೆಟ್ಟವನಿರಲಿ ಅದು ಮುಖ್ಯವಲ್ಲ. ಆಗ ಅವರ ರಾಜ್ಯವಿತ್ತೆಂದು ಅವರಿಗೆ ನಮಸ್ಕರಿಸುತ್ತಿದ್ದರು. ಈಗ ಪ್ರಜಾರಾಜ್ಯದಲ್ಲಿ ಊರಿಗೆ ದೊಡ್ಡವನೆನಿಸಿಕೊಂಡ ನನಗೆ ನಮಸ್ಕರಿಸುತ್ತಿದ್ದಾರೆ.

ಕುಟುಂಬ, ಸಮಾಜ ಒಳಗಿರುವ ವ್ಯಕ್ತಿ ಈ ಸಂಸ್ಥೆಗಳಿಗೆ ಮುಖಾಮುಖಿಯಾಗಿ ಶೋಧಿಸಿ ತನ್ನನ್ನು ಗುರುತಿಸಿಕೊಳ್ಳುವ ಕ್ರಿಯೆ ಈ ಕಥೆಯಲ್ಲಿದೆ.

'ದುರಸ್ತಿ' ಕಥೆಯಲ್ಲಿ ಈ ಕ್ರಿಯೆಯ ನೆಲೆ ಮುಂದುವರಿಯುತ್ತದೆ. ತಿಮ್ಮ ನಗರದಲ್ಲಿ ಸೈಕಲ್ ರಿಕ್ಷಾ ತುಳಿಯುವ ದುಡಿಮೆಗಾರ. ಗಿರಾಕಿಗಳನ್ನು ಕೂಡಿಸಿಕೊಂಡು ರಿಕ್ಷಾ ತುಳಿಯುತ್ತಲೇ ತನ್ನ ಬದುಕನ್ನು ಶೋಧಿಸಿಕೊಳ್ಳುತ್ತಾನೆ. 'ಅಯ್ಯ' ಎಂಬ ಧಣಿಗೆ ಮಗನಾಗಿದ್ದರೂ ಜಾತಿ, ಬಡತನ, ದುಡಿಮೆಯಲ್ಲಿ ಯಾವ ಪಲ್ಲಟವನ್ನೂ ಕಾಣದವನು. ತನ್ನ ಕುಟುಂಬದ ಒಳಗೆ ಕಳ್ಳುಬಳ್ಳಿಯ ಸಂಬಂಧಗಳು ಛಿದ್ರವಾಗಿದ್ದರೂ ಅದನ್ನು ಸಹಿಸುವ, ಸರಿದಾರಿಗೆ ತರುವ ಮಾನವೀಯ ನೆಲೆಯಲ್ಲಿ ಯತ್ನ ನಡೆಸುತ್ತಾನೆ. ತಿಮ್ಮನಿಗೆ ಯಾವುದೂ ಪೂರಕವಾಗಿ ಒದಗುವುದಿಲ್ಲ. ಅನೈತಿಕ ಸಂಬಂಧದಲ್ಲೇ ಬದುಕುವ ಗಂಗಿಯನ್ನು ಮದುವೆಯಾಗಿ ಬಾಳನ್ನು ಕಟ್ಟುವ ಆತನ ಗುರಿಗೆ ಗಂಗಿಯೇ ಕೈಕೊಡುತ್ತಾಳೆ. ತಂಗಿ ನಾಗಮ್ಮನನ್ನೂ ಸಂಸಾರಸ್ಥಳನ್ನಾಗಿ ಮಾಡಲು ಯತ್ನಿಸಿ ಸೋಲುತ್ತಾನೆ. ಫ್ರಿವೀಲ್ ಕೆಟ್ಟು ಸೈಕಲ್ ರಿಕ್ಷಾ ತಿಮ್ಮನಿಗೆ ತೊಂದರೆ ಕೊಡುತ್ತಿದ್ದರೂ, ಅದನ್ನು ದುರಸ್ತಿ ಮಾಡದೆ ಗಂಗಿ, ನಾಗಮ್ಮನನ್ನು ಸರಿಪಡಿಸಲು ಪ್ರಯತ್ನಿಸುವುದು ಒಂದು ವ್ಯಂಗ್ಯವಾಗಿ ಕಾಣುತ್ತದೆ. ಕುಟುಂಬದ ಒಳಗೆ ಅನೈತಿಕತೆಗೆ ಬೇಸತ್ತಂತೆ ತಿಮ್ಮ ಸಮಾಜದಲ್ಲೂ ಅದನ್ನೇ ಎದುರುಗೊಳ್ಳುತ್ತಾನೆ. ಹೆಣ್ಣುಗಳನ್ನು ಸಾಗಿಸುವ ದಲ್ಲಾಳಿ, ಸರ್ಕಾರದ ದಾಸ್ತಾನನ್ನು ಕೊಳ್ಳೆ ಹೊಡೆಯುವ ಉದ್ಯೋಗಿಗಳನ್ನು ಅವನು ಎದುರಿಸಬೇಕಾಗುತ್ತದೆ. ಬದುಕುವ ಕುಟುಂಬ ಮತ್ತು ಸಮಾಜದಲ್ಲಿ ನಡೆಯುವ ಅನೈತಿಕ ಸಂಬಂಧಗಳ ನಡುವೆ ವ್ಯಕ್ತಿಯಾಗಿ ತಿಮ್ಮ ತನ್ನನ್ನು, ತನ್ನತನವನ್ನು ರಕ್ಷಿಸಿಕೊಳ್ಳುವುದೇ ಸವಾಲಾಗುತ್ತದೆ. 'ಇನ್ನ ಮ್ಯಾಕ ಯಾರು ಸತ್ತರೇನು, ಯಾರು ಅತ್ತರೇನು, ನನ್ನ ಮನ್ಸಿಗೆ ಬಂದಂಗ ಇದ್ರಾಯ್ತು' ಎಂಬ ನಿರ್ಧಾರವೂ ತಾತ್ಕಾಲಿಕವೇ ಆಗಬಹುದು. 'ವೃತ್ತ' ಮತ್ತು ಈ ಕಥೆಯ ವಿನ್ಯಾಸ ಒಂದೇ. ಶಂಕರಪ್ಪಗೌಡ, ತಿಮ್ಮ ಇಬ್ಬರೂ ಚಲಿಸುತ್ತಲೇ ಭೂತ-ವರ್ತಮಾನಗಳ ಸುಳಿಯಲ್ಲಿ ಸುತ್ತುತ್ತಿರುತ್ತಾರೆ. ಕಥೆಗಳಲ್ಲಿ ಎರಡು ದಿನಗಳು (ಅವಧಿ) ಕಾಣಿಸುತ್ತವೆ. 'ವೃತ್ತ' ಹಳ್ಳಿ ಪರಿಸರದಲ್ಲಿ ಸಂಭವಿಸಿದರೂ, ಮಾತು (ಸಂಭಾಷಣೆ) ಉಳಿದು ಭಾಷೆ ಗ್ರಾಂಥಿಕವಾಗಿದೆ. 'ದುರಸ್ತಿ' ನಗರ ಕೇಂದ್ರಿತವಾಗಿದ್ದರೂ ಭಾಷೆ ಹಳ್ಳಿಯ ಆಡುನುಡಿಯಲ್ಲಿದೆ. ಕಥೆಗಳಿಗೆ ಎರಡು ನೆಲೆಗಳು ಪೂರಕವಾಗಿಯೇ ಇವೆ.

ಕುಟುಂಬ-ಸಮಾಜ ಮತ್ತು ವ್ಯಕ್ತಿಯ ನಡುವಿನ ಅಂತರ್‌ಸಂಬಂಧದ ತೀವ್ರ ಶೋಧ 'ಭೂತ' ಕಥೆಯಲ್ಲಿಯೂ ಮುಂದುವರಿಯುತ್ತದೆ. ಈ ಕಥೆಯ ನಾಯಕ ರಮೇಶ ವಿದ್ಯಾವಂತ. ರಾಜವಾಡೆಯಲ್ಲಿ ಹುಟ್ಟಿ ಬೆಳೆದ ಧಣಿ ವಂಶಸ್ಥ. ಆದರೆ, ರಾಜವಾಡೆ ಮತ್ತು ಧಣಿತನ ಇವುಗಳ ಯಾಜಮಾನ್ಯದಿಂದ